

# ಎರಡು ದೇಶಗಳಲ್ಲಿ ಪವಡಿಸುವ ರಾಜ

■ ಪ್ರವೀಣ ಕುಲಕರ್ಣಿ

ಭಾರತ – ಮ್ಯಾನ್ಮಾರ್ ಗಡಿಯಲ್ಲಿರುವ ಲೋಂಗ್ವಾ ಎಂಬ ಊರಿನಲ್ಲಿರುವ ಇವರೊಬ್ಬ ರಾಜ. ಇವರ ಆಡಳಿತಕ್ಕೆ ಒಳಪಟ್ಟ 40 ಹಳ್ಳಿಗಳ ಜನ ಇವರನ್ನು 'ಅಂಗ' ಎಂದೇ ಕರೆಯುವುದುಂಟು. ಈ ರಾಜನ ಮನೆಯ ಅರ್ಧಭಾಗ ಭಾರತದಲ್ಲಿದ್ದರೆ, ಉಳಿದರ್ಧ ಭಾಗ ಮ್ಯಾನ್ಮಾರ್‌ನಲ್ಲಿದೆ! ಹೀಗಾಗಿ ರಾಜ ತೊನೋಯ್ ಫಾವಂಗ್ ಭಾರತದಲ್ಲಿ ಊಟ ಮಾಡಿದರೆ, ನಿದ್ರಿಸುವುದು ಮ್ಯಾನ್ಮಾರ್‌ನಲ್ಲಿ. 'ಇನ್ನೂ ಕುತೂಹಲದ ಸಂಗತಿಯೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇ' ಎಂದು ಕೇಳುವ ತೊನೋಯ್, 'ನಮ್ಮೂರಲ್ಲಿ ಮಳೆಯಾದರೆ, ನನ್ನ ಮೇಲೆ ಬೀಳುವ ಮಳೆ ನೀರು, ಅರ್ಧ ಭಾರತದ ಕಡೆಗೆ, ಇನ್ನರ್ಧ ಮ್ಯಾನ್ಮಾರ್ ಕಡೆಗೆ ಹರಿಯುತ್ತದೆ ಗೊತ್ತೇ' ಎಂದು ಕೇಳುಗರನ್ನು ಇಂತಹ ಇನ್ನಷ್ಟು ಕಥೆಗಳನ್ನು ಆಲಿಸುವಂತೆ ತುದಿಗಾಲ ಮೇಲೆ ನಿಲ್ಲಿಸುತ್ತಾರೆ.

ಕೊನ್ಯಾಕ್ ನಾಗಾ ಬುಡಕಟ್ಟಿನ ರಾಜ ತೊನೋಯ್. ನಾಗಾಲ್ಯಾಂಡ್‌ನ ತುತ್ತತುದಿಯಲ್ಲಿರುವ ಅವರ ಊರು ಮತ್ತು ಅಲ್ಲಿರುವ ಅವರ ಸಮುದಾಯ ಹಲವು ಅಚ್ಚರಿಗಳ ತೊಟ್ಟಿಲು. ಕೊನ್ಯಾಕ್ ನಾಗಾ ಸಾಮ್ರಾಜ್ಯದ ರಾಜಧಾನಿಯೇ ಲೋಂಗ್ವಾ. ಅಂದಹಾಗೆ ಕೊನ್ಯಾಕ್ ಸಾಮ್ರಾಜ್ಯ ಭಾರತ ಮತ್ತು ಮ್ಯಾನ್ಮಾರ್ ಎರಡೂ ಕಡೆಗಳಲ್ಲಿ ಹರಡಿದೆ. 'ತಲೆ ಶಿಕಾರಿ' ಮಾಡುವುದು ಈ ಕೊನ್ಯಾಕ್ ನಾಗಾ ಬುಡಕಟ್ಟು ಸಮುದಾಯದ ಕುಲಕಸುಬು ಆಗಿದ್ದ ಕಾಲವೊಂದಿತ್ತು. ಅಂತಹ ತಲೆ ಶಿಕಾರಿಯ ಶ್ರೀಮಂತ ಪರಂಪರೆಯ ದ್ಯೋತಕವಾಗಿ ತೊನೋಯ್ ಅವರ ಮನೆಯನ್ನು ಹಲವು ಪ್ರಾಣಿಗಳ ತಲೆಬುರುಡೆಗಳು ಅಲಂಕರಿಸಿವೆ. ಊರಿಗೆ ಯಾರೇ ಬಂದರೂ ರಾಜನನ್ನು ಭೇಟಿಯಾಗಿ ಏನಾದರೂ ಕಾಣಿಕೆಯನ್ನು ಅರ್ಪಿಸಲೇಬೇಕು. ಅತಿಥಿಗಳಿಂದ ಕಾಣಿಕೆ ಸ್ವೀಕರಿಸುವ ಈ ರಾಜ, ಪ್ರತಿಯಾಗಿ ಸಾಮ್ರಾಜ್ಯದ ಪರವಾಗಿ ಏನಾದರೊಂದು ಕಾಣಿಕೆ ಕೊಡುವುದು ರೂಢಿ.

ಒಲೆಗೂಡಿನ ಮುಂದೆ ಕುಳಿತು ಸಭೆ ನಡೆಸುವ ಈ ರಾಜ, ತಮ್ಮ ಸಾಮ್ರಾಜ್ಯದಲ್ಲಿ ಜನ ನಡೆದುಕೊಳ್ಳುವ ರೀತಿಯ ಕುರಿತು ಅಲ್ಲಿಂದಲೇ ಹುಕುಂ ಹೊರಡಿಸುವರು. ಏನೇ ವಿಷಯವಿದ್ದರೂ ಚರ್ಚಿಸಿ, ನಿರ್ಣಯ ಕೈಗೊಳ್ಳಲು ಅವರದೊಂದು ಮಂತ್ರಿ ಪರಿಷತ್ ಬೇರೆ ಇದೆ. ಪೂರ್ವಜರಿಂದ ಪಾಲನೆ ಮಾಡುತ್ತಾ ಬಂದ ಕಟ್ಟುಪಾಡುಗಳನ್ನು ಹಾಗೇ ಉಳಿಸಿಕೊಂಡಿರುವ ಅವರು, ಭಾರತ ಸರ್ಕಾರ ಜಾರಿಗೊಳಿಸುವ ಕಾನೂನುಗಳನ್ನು ಆಡಳಿತಾತ್ಮಕವಾಗಿ ಪಾಲನೆ ಮಾಡುವರು. 'ನನ್ನ ಸಾಮ್ರಾಜ್ಯದ ಸಚಿವರು ಕಾನೂನು ಅನುಷ್ಠಾನದ ಹೊಣೆ ನೋಡಿಕೊಳ್ಳುತ್ತಾರೆ. ಏನಾದರೂ ನಿರ್ಣಯ ಕೈಗೊಳ್ಳುವ ಪ್ರಮೇಯ ಬಂದಾಗ ನನ್ನ ಮಾತೇ ಅಂತಿಮವಾಗಿರುತ್ತದೆ' ಎಂದು ಈ ರಾಜ ಹೇಳುತ್ತಾರೆ.

'ಮ್ಯಾನ್ಮಾರ್‌ನ ತತ್ಮಾಡಾವ್ ಎಂಬ ಬುಡಕಟ್ಟು ಜನಾಂಗದವರು ರಾತ್ರೋರಾತ್ರಿ ನನ್ನ ಸಾಮ್ರಾಜ್ಯಕ್ಕೆ ನುಗ್ಗಿ ದರೋಡೆ ನಡೆಸುತ್ತಿದ್ದರು. ಆದರೆ, ಈಗ ಅಂತಹ ಉಪಟಳ ಬಹುಮಟ್ಟಿಗೆ ತಗ್ಗಿದೆ. ಗಡಿಯಲ್ಲಿ ಕಾವಲು ಹೆಚ್ಚಾಗಿರುವುದು ಮತ್ತು ಮಾನ್ಮಾರ್‌ನಲ್ಲಿ ರಾಜಕೀಯ ಚಿತ್ರಣ ಬದಲಾಗಿರುವುದು ಇದಕ್ಕೆ ಕಾರಣವಾಗಿದೆ' ಎಂದು ತೊನೋಯ್ ವಿವರಿಸುತ್ತಾರೆ. ಲೋಂಗ್ವಾ ಗ್ರಾಮದಲ್ಲಿ ಭಾರತೀಯ ಸೇನೆಯ ಗಡಿಠಾಣೆಯೂ ಇದೆ. ಸೇನೆಯಿಂದ ಗ್ರಾಮಸ್ಥರಿಗೆ ಯಾವ ನೆರವೂ ಸಿಗುವುದಿಲ್ಲವೇ ಎಂಬ ಪ್ರಶ್ನೆ ಎದುರಾದಾಗ, 'ಭಾರತೀಯ ಸೇನೆಯು ಗಡಿ ದಾಟಿ ಹೋಗುವುದಿಲ್ಲ. ಗಡಿಯೊಳಗೆ ಬಂದು ತತ್ಮಾಡಾವ್ ಜನ ದರೋಡೆ ಮಾಡುತ್ತಿರಲಿಲ್ಲ. ಹೀಗಾಗಿ ಅವರ ಉಪಟಳ ಮೀತಿಮೀರಿತ್ತು' ಎಂದು ಉತ್ತರಿಸುತ್ತಾರೆ.

ಮ್ಯಾನ್ಮಾರ್ ಪ್ರದೇಶದಲ್ಲಿರುವ ತಮ್ಮ ಸಾಮ್ರಾಜ್ಯದ ಹಳ್ಳಿಗಳಲ್ಲಿ ಮನೆ ಕಟ್ಟಲು, ಶಾಲೆ, ಚರ್ಚ್‌ಗಳ ಕಟ್ಟಡ ನಿರ್ಮಿಸಲು ಈ ರಾಜ ಭಾರತದಿಂದ ಕಟ್ಟಡ ಸಾಮಗ್ರಿ ಕಳೆಹಾಕುತ್ತಾರೆ. ಯಾವುದೇ ಊರಿನಲ್ಲಿ ಸಾಂಕ್ರಾಮಿಕ ರೋಗ ಕಾಣಿಸಿಕೊಂಡ ತಕ್ಷಣ ರಾಜನಿಗೆ ಮಾಹಿತಿ ಹೋಗುತ್ತದೆ. ತಕ್ಷಣ ರಾಜನ ಮಂತ್ರಿ ಪರಿಷತ್ತು ಜನರ ನೆರವಿಗೆ ಧಾವಿಸುತ್ತದೆ. ಭಾರತ ಸರ್ಕಾರದಿಂದ ಆಹಾರ ಮತ್ತು ಔಷಧಿ ಸಾಮಗ್ರಿಯೂ ಈ ರಾಜನಿಗೆ ಬಟವಾಡೆ ಆಗುತ್ತದೆ. ಅದನ್ನು ತಮ್ಮ ಪ್ರಜೆಗಳಿಗೆ ತಲುಪಿಸುವ ಹೊಣೆಯೂ ಅವರದಾಗಿರುತ್ತದೆ. ಈ ರಾಜನ ಸಾಮ್ರಾಜ್ಯದಲ್ಲಿ ತಂತ್ರಜ್ಞಾನದ ಸಾಧನಗಳು ಅಷ್ಟಾಗಿ ತಲುಪಿಲ್ಲ. ಹೀಗಾಗಿ ಹಳ್ಳಿ–ಹಳ್ಳಿಗಳ ನಡುವೆ ಸಂಪರ್ಕ ಸುಲಭವಲ್ಲ.

ಮ್ಯಾನ್ಮಾರ್‌ನ ಹಳ್ಳಿಗಳಲ್ಲಿರುವ ಜನ ಆಸ್ಪತ್ರೆಗೆ, ವ್ಯಾಪಾರಕ್ಕೆ ಗಡಿದಾಟಿ ಭಾರತದ ಹಳ್ಳಿಗಳಿಗೆ ಬರುವುದು ರೂಢಿ. ಮಕ್ಕಳು ಶಾಲೆಗೆ ಹೋಗಲು ಸಹ ಗಡಿದಾಟಿ ಬರುವರು. ಅವರ ಯೋಗಕ್ಷೇಮವನ್ನೂ ರಾಜ ನೋಡಿಕೊಳ್ಳುವರು. 'ಸಂಶಯವೇ ಇಲ್ಲ, ನಮಗೆ ಒಂದಿಷ್ಟು ವಿಶೇಷ ಹಕ್ಕುಗಳು ಇಲ್ಲುಂಟು. ಸ್ವಾತಂತ್ರ್ಯವೂ ಉಂಟು. ಆದರೆ, ಅಭಿವೃದ್ಧಿ ವಿಷಯದಲ್ಲಿ ನನ್ನ ಸಾಮ್ರಾಜ್ಯ ಇನ್ನೂ ಬಹುದೂರ ಸಾಗಬೇಕಿದೆ. ನಮ್ಮ ಪರಂಪರೆಯನ್ನು ಉಳಿಸಿಕೊಂಡೇ ನಾವೂ ಆಧುನಿಕವಾಗಿ ಬೆಳೆಯಬೇಕಿದೆ. ಭಾರತದಲ್ಲಿ ಸಿಗುವಷ್ಟು ಅವಕಾಶ, ಸೌಲಭ್ಯಗಳು ಮ್ಯಾನ್ಮಾರ್‌ನಲ್ಲಿ ಇಲ್ಲ ಎನ್ನುವ ಅರಿವೂ ಇದೆ' ಎನ್ನುತ್ತಾರೆ ತೊನೋಯ್.

ಕತ್ತಿನಲ್ಲಿ ಲೋಹದ ರುಂಡಗಳು ಹಾಗೂ ಚಾಕುಗಳ ಮಾಲೆಯನ್ನು ಧರಿಸುವ ಈ ರಾಜ, ಜನಕಲ್ಯಾಣದ ವಿಷಯದಲ್ಲಿ ಮಾತ್ರ ಸದಾ ಮುಂದು. ಹಾಗೆಂದೇ ಜನರಿಗೂ ಈ ರಾಜನ ಮೇಲೆ ಪ್ರೀತಿಯೇ ಎಂದೆಂದೂ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65